# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ-ವಾದಿ ಪರ ವಕೀಲರಾದ ಶ್ರೀ. ಎನ್ ಎಸ್ ರವರಿಂದ

ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ನಿಮ್ಮ ವಕಿಲರು ತಯಾರಿಸಿದ್ದು ಅದಕ್ಕೆ ನೀವು ಸಹಿ ಮಾತ್ರ ಮಾಡಿದ್ದೀರಿ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸ.ನಂಬರ್ ಏನು ಎಂದರೆ ಸ.ನಂ.10/1 ಎ ರಲ್ಲಿನ 6 ಎಕರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆಃ ಗಂಗಮ್ಮ ಮತ್ತು ಚಿಕ್ಕಣ್ಣ, ಪಶ್ಚಿಮ ಮತ್ತು ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ಚಿಕ್ಕಣ್ಣ ಎಂದರೆ ದಕ್ಷಿಣಕ್ಕೆಃ ಗೊರವಯ್ಯ ರವರ ಉಳಿಕೆ ಜಮೀನು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಯರು ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಕೇವಲ 3 ಎಕರೆಯಲ್ಲಿ ಮಾತ್ರ ಸ್ವಾಧೀನದಲ್ಲಿ ಇದ್ದು, 3 ಎಕರೆಯನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನೀವು ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವಂತೆ ಯಾವ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದರೆ ಎಸ್ ಬಿ ಐ ಚೇಳೂರಿನಲ್ಲಿ ಎಂದು ನುಡಿಯುತ್ತಾರೆ. ಅವರು ಎಷ್ಟನೇ ಸಾಲಿನಲ್ಲಿ ಸಾಲ ಮಾಡಿದ್ದರು ಎಂದರೆ 2010 ಇರಬಹುದು ಎಂದು ನುಡಿಯುತ್ತಾರೆ. ಅವರು ಮಾಡಿದ್ದರು ಎಂದು ಹೇಳಲಾದ ಸಾಲದ ದಾಖಲಾತಿಗಳನ್ನು ನೀವು ನೋಡಿದ್ದಿರಾ ಎಂದರೆ ನೋಡಿದ್ದೇನೆ ಎಂದು ನುಡಿಯುತ್ತಾರೆ. ವಾದಿಯ ಮದುವೆ ಯಾವ

ದಿನಾಂಕದಂದು ಆಗಿರುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 250 ಗ್ರಾಂ ಚಿನ್ನದ ಗಟ್ಟಿ ಕೊಟ್ಟಿದ್ದರಾ ಅಥವಾ ಆಭರಣಗಳನ್ನು ಕೊಟ್ಟಿದ್ದರಾ ಎಂದರೆ ಒಡವೆ ತೆಗೆದುಕೊಳ್ಳಲು ಹುಡುಗಿಯ ಅಣ್ಣನಾದ ಮಧು ರವರಿಗೆ ಜಮೀನು ಮಾರಿ ಬಂದಿದ್ದ 15 ಲಕ್ಷ ಹಣವನ್ನು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಆ ರೀತಿ ಹಣವನ್ನು ಅವರಿಗೆ ನೀಡಿದ್ದರು ಎಂದರೆ ಮರೆತಿದ್ದೇನೆ ಎಂದು ನುಡಿಯುತ್ತಾರೆ. ವಾದಿಯ ಅಣ್ಣನಿಗೆ ಹಣವನ್ನು ಕೊಟ್ಟಿಲ್ಲ, ಒಡವೆಗಳನ್ನು ಕೂಡ ಮಾಡಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2. ಯಾವ ದಿನಾಂಕದಂದು ಗೊರವಯ್ಯ ರವರು ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ವಾರ, ಯಾವ ಇಸವಿ ಮತ್ತು ಎಷ್ಟು ಗಂಟೆಗೆ ಮಾರಾಟವಾಗಿದೆ ಎಂದರೆ ಮರೆತಿದ್ದೇನೆ ಎಂದು ನುಡಿಯುತ್ತಾರೆ. ಗೊರವಯ್ಯ ರವರು ಯಾರಿಗೆ ಮಾರಾಟ ಮಾಡಿದ್ದರು ಎಂದರೆ ಗೌರಮ್ಮ ರವರಿಗೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿದ್ದರು ಎಂದರೆ ಸಾಕ್ಷಿಯು ಬಿ ಜಿ ರೇಣುಕಪ್ಪ ರವರು ಸಹಿ ಮಾಡಿದ್ದರು, ಉಳಿದವರು ಯಾರು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗೊರವಯ್ಯ ಮತ್ತು ಅವರ ಮಕ್ಕಳು ಯಾರೆಲ್ಲಾ ಸಹಿ ಮಾಡಿದ್ದರು ಎಂದರೆ ಗೊರವಯ್ಯ, ಮಧು ಸಹಿ ಮಾಡಿದ್ದರು ಎಂದು ನುಡಿಯುತ್ತಾರೆ. ಅವರು ಇಬ್ಬರು ಮಾತ್ರ ಕ್ರಯ ಪತ್ರ ಬರೆದುಕೊಟ್ಟಿದ್ದಾರಾ ಎಂದರೆ ನನಗೆ ಗೊತ್ತಿರುವುದು ಅಷ್ಟೆ ಎಂದು ನುಡಿಯುತ್ತಾರೆ. ಆ ದಿನ ವಾದಿ ತರಾ ರವರು ನೊಂದಣಿ ಕ್ರಯ ಪತ್ರಕ್ಕೆ ಸಹಿ ಮಾಡಿದ್ದರಾ ಮತ್ತು ಅವರು ಹಾಜರಿದ್ದರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು 1 ನೇ ಪ್ರತಿವಾದಿ ಒಂದೇ ಊರಿನವರಾಗಿದ್ದು ಬಹಳ ವಿಶ್ವಾಸದಿಂದ ಇದ್ದೀರಿ ಎಂದರೆ ಸಾಕ್ಷಿಯು ಅವರು ನಮ್ಮ ಊರಿನವರು ಆದರೆ ವಿಶ್ವಾಸದಿಂದ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ 1 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ

ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ . ಹೇ. ಕೇ. ಸರಿ. ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಗುಬ್ಬಿ.**

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.